## ಉತ್ತರ ಕರ್ನಾಟಕದ ಕುಕ್ಕೆ

ರಾಯಚೂರು ಜಿಲ್ಲೆಯು ಐತಿಹಾಸಿಕವಾಗಿ, ಸಾಹಿತ್ಯಕವಾಗಿ ಅಲ್ಲದೆ ಧಾರ್ಮಿಕ ಕ್ಷೇತ್ರದಲ್ಲೂ ಮಹೋನ್ನತಿಯನ್ನು ಪಡೆದಿದೆ. ಇದಕ್ಕೆ ಪುಷ್ಟಿ ಎಂಬಂತೆ ರಾಯಚೂರು ನಗರದಿಂದ 16 ಕಿ.ಮೀ. ದೂರದಲ್ಲಿರುವ ಸುಕ್ಷೇತ್ರ ಕಲ್ಮಲಾ ಉತ್ತರ ಕರ್ನಾಟಕದ ಕುಕ್ಕೆ ಎಂತಲೇ ಪ್ರಸಿದ್ಧಿ ಪಡೆದಿದೆ. ಇಲ್ಲಿರುವ ದೇವಾಲಯದಲ್ಲಿ ಆರಾಧ್ಯ ದೈವವಾಗಿ ಸಂತ ಕರಿಯಪ್ಪ ತಾತಾ ಅವರ ಗದ್ದುಗೆಗೆ ಪೂಜಿಸಲಾಗುತ್ತಿದೆ. ಪವಾಡ ಪುರುಷರಾಗಿದ್ದ ಕರಿಯಪ್ಪ ತಾತನನ್ನು ನಂಬಿದರೆ ಕಂಕಣ ಭಾಗ್ಯ, ಸಂತಾನ ಭಾಗ್ಯ ಕರುಣಿಸುತ್ತಾನೆ ಎಂಬ ನಂಬಿಗೆಯಿದೆ. ಕರಿಯಪ್ಪ ತಾತನ ಫೋಟೋ ಮನೆಯಲ್ಲಿದ್ದರೆ ಯಾವ ವಿಷ ಜಂತುಗಳ ಉಪಟಳ ಇರುವುದಿಲ್ಲ ಎಂಬ ನಂಬಿಗೆಯೂ ಈ ಭಾಗದ ಜನರಲ್ಲಿದೆ. ಶ್ರಾವಣ ಮಾಸದಲ್ಲಿ ಇಡೀ ತಿಂಗಳು ಜಾತ್ರೆ ನಡೆಯುತ್ತದೆ.

**-ಈರಣ್ಣ ಬೆಂಗಾಲಿ, ರಾಯಚೂರು**





## ಇಲ್ಲಿ ಪೊರಕೆ ಪೂಜನೀಯ!

ಕೆಲವು ದಿನಗಳ ಹಿಂದೆ ಮಹಾರಾಷ್ಟ್ರದ ನವಿ ಮುಂಬೈಯಲ್ಲಿರುವ ನಮ್ಮ ಬಂಧುಗಳ ಗೃಹಪ್ರವೇಶಕ್ಕೆ ಹೋಗಿದ್ದೆವು. ನಮ್ಮಲ್ಲಿನ ಪದ್ಧತಿಗಳಿಗಿಂತ ಸ್ವಲ್ಪ ವಿಭಿನ್ನವಾದ ಗೃಹಪ್ರವೇಶ ಸಂಪ್ರದಾಯಗಳು ಅಲ್ಲಿವೆ. ಈ ಆಚರಣೆಯಲ್ಲಿ ಹೊಸ ಮನೆಯಲ್ಲಿ ಕಸ ಗುಡಿಸಲು ತಂದ ಹೊಸ ಪೊರಕೆಯನ್ನು ಹೊಸ್ತಲಲ್ಲಿ ಟ್ಟು ಪೂಜಿಸುತ್ತಿರುವುದನ್ನು ಗಮನಿಸಿ ಆಶ್ಚರ್ಯವಾಯಿತು.

**-ರಘುನಾಥರಾವ್ ತಾಪ್ಸೆ, ದಾವಣಗೆರೆ**

## ಬೂದಿ ಕೋಟೆ

ಬೂದಿಕೋಟೆ ಎಂಬ ಊರು ಕೋಲಾರಕ್ಕೆ ಹೋಗುವ ಮಾರ್ಗದಲ್ಲಿರುವ ಬಂಗಾರುಪೇಟೆ (ಬೌರಿಂಗ್ ಪೇಟೆ) ಸಮೀಪ ಇದೆ. ಇಲ್ಲಿ ಹೈದರಾಲಿಯವರು ಜನಿಸಿದ್ದ ಸ್ಥಳವಿದ್ದು, ಇಲ್ಲಿರುವ ಒಂದು ಕೋಟೆಯಲ್ಲಿ ಹೈದರಾಲಿ ವಾಸಿಸುತ್ತಿದ್ದನಂತೆ. ಈ ಊರಿಗೆ 'ಬೂದಿಕೋಟೆ' ಎಂಬ ಹೆಸರು ಬಂದಿರುವ ಬಗ್ಗೆ ಇಲ್ಲಿಯವರು ಒಂದು ಸಣ್ಣ ಕಥೆ ಹೇಳುತ್ತಾರೆ. ಈ ಊರಲ್ಲಿ ಒಬ್ಬ ದುಷ್ಟ ರಾಕ್ಷಸ ಅಲ್ಲಿಯ ಪ್ರಜೆಗಳನ್ನೆಲ್ಲಾ ಹಿಂಸೆ ಮಾಡಿ ಕೊಲ್ಲುತ್ತಿದ್ದನಂತೆ. ಆ ಸಮಯದಲ್ಲಿ ಶ್ರೀಕೃಷ್ಣ ಪರಮಾತ್ಮನು ಬಂದು ಆ ರಾಕ್ಷಸನನ್ನು ಕೊಂದು ಸುಟ್ಟು ಬೂದಿ ಮಾಡಿದನೆಂದೂ ಮತ್ತು ಆ ಬೂದಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಉಂಡೆ ಕಟ್ಟಿ ಬಿಸಾಡಿದನೆಂದೂ ಇಲ್ಲಿಯವರು ಕಥೆ ಹೇಳುತ್ತಾರೆ.

ಇಲ್ಲಿಯ ಮತ್ತೊಂದು ವಿಶೇಷವೆಂದರೆ ಶ್ರೀಕೃಷ್ಣನು ಬೂದಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಉಂಡೆ ಮಾಡಿದ ಸಂಕೇತವಾಗಿ ಈ ಊರಲ್ಲಿ 'ಪಡ್ಡು' ಎಂಬ ಫಲಾಹಾರ (ತೆಲುಗು ಭಾಷೆಯಲ್ಲಿ ಗುಂತ ಪೊಂಗಲ್) ವಿಶೇಷವಾಗಿದೆ. ಈ ರುಚಿಯಾದ ತಿಂಡಿ ಎಲ್ಲಾ ಹೋಟೇಲ್‌ಗಳಲ್ಲಿ ಸಿಗುತ್ತದೆ. ವರ್ಷಕ್ಕೊಮ್ಮೆ ಸಂತೆ ಮಾಡಿ ಈ ತಿಂಡಿಯನ್ನು ಮಾರುತ್ತಾರಂತೆ.

**-ಲಲಿತ ರಾವ್, ಬೆಂಗಳೂರು**




